ಹಿರಿಯರು. ಎಷ್ಟೋ ವರ್ಷಗಳಿಂದ ಈ ವ್ಯಾಪಾರದಲ್ಲಿದ್ದೀರಿ. ಹೊಸದಾಗಿ ಬಂದಿರೋ ನಮ್ಮ ಕೋಕಾ–ಕೋಲಾವನ್ನು ನಿಮ್ಮಂಥ ಹಿರಿಯರು ಮಾರಿದರೆ ನಮಗೂ ಹೆಮ್ಮೆ, ಗೌರವ, ಜನರಿಗೂ ನಂಬಿಕೆ ಬರುತ್ತೆ. ಅದಕ್ಕೇ ತಮ್ಮಲ್ಲಿ ಕೇಳಿಕೊಳ್ತಿದ್ದೇನೆ. ತಾವು ಯಾವುದೇ ಡಿಪಾಜಿಟ್ ಕೊಡಬೇಕಾಗಿಲ್ಲ. ತಾವು ನಮ್ಮ ಏಜೆನ್ಸಿ ತೆಗೆದುಕೊಂಡರೆ ಸಾಕು. ಬೇಡವೆನ್ನಬೇಡಿ" ಅಂದ.

ಎದುರಿಗೆ ನಿಂತಿರೋದು ಹೊಸದಾಗಿ ಕೆಲಸಕ್ಕೆ ಸೇರಿಕೊಂಡಿರೋ ಎಳೆ ವಯಸ್ಸಿನ ಹುಡುಗ. ಪಾಪ ಅವನ ಹತ್ತಿರ ಎಂಥಾ ಮಾತು, ಜಗಳ ಎಂಥಾದಕ್ಕೆ? "ಒಂದು ನಿಮಿಷ ಬಂದೆ ಇರಿ" ಅಂದು ಒಳಗೆ ಹೋಗಿ ಚೆನ್ನಾಗಿ ತೊಳೆದ ಲೋಟದಲ್ಲಿ ತಾನೇ ತಯಾರಿಸಿದ ತಂಪಾದ 'ಸುಗಂಧ ಸೋಡಾ' ತಂದು, "ಇದು ನಮ್ಮ ಪೆಂಡೆಂ ಸೋಡಾ ಸೆಂಟರ್‌ನ ವಿಶೇಷ, ತೆಗೆದುಕೊಳ್ಳಿ" ಎಂದ. ಸ್ವಲ್ಪ ಹೊತ್ತು ಬಿಟ್ಟು ಕೇಳಿದ ಚಂದ್ರಣ್ಣ,

"ಹೇಗಿದೆ?"

"ಚೆನ್ನಾಗಿದೆ."

"ಸತ್ಯ ಹೇಳಿ. ನಿಮ್ಮ ಕೋಕಾ–ಕೋಲಾಕ್ಕೆ ಹೋಲಿಸಿದರೆ ಹೇಗಿದೆ?"

"ಸತ್ಯ ಹೇಳ್ತಿದ್ದೀನಿ. ನಮ್ಮ ಕೋಕಾ–ಕೋಲಾಗಿಂತಾ ಚೆನ್ನಾಗಿದೆ" ಅಂತ ಒಪ್ಪಿಕೊಂಡ.

"ಹೌದಲ್ಲವೇ? ಸರಿ ಹಾಗಿದ್ದರೆ. ನಿಮ್ಮ ಕೋಕ–ಕೋಲಾ ನಾನು ಮಾರುವುದಿಲ್ಲ. ನೀವಿನ್ನು ಹೊರಡಿ" ಅಂದ ಚಂದ್ರಣ್ಣ.

"ಚಂದ್ರಣ್ಣನವರೇ, ನಿಮ್ಮ ಬಗ್ಗೆ ಸಂಪೂರ್ಣ ಮಾಹಿತಿ ಕಲೆಹಾಕಿ ತಿಳಿದುಕೊಂಡ ನಂತರವೇ ನಾನಿಲ್ಲಿಗೆ ಬಂದಿರುವುದು. ನಿಮ್ಮದೇನಿದ್ದರೂ ಹಳೇ ಕಾಲದ ಯೋಚನೆ. ನಮ್ಮ ಕಂಪನಿಯವರ ಬಂಡವಾಳ ಎಷ್ಟು ಗೊತ್ತುಂಟಾ? ನಮ್ಮ ಜಾಹೀರಾತು, ಪ್ರಚಾರದ ಭರಾಟೆ ಹೇಗಿರುತ್ತದೋ ಯೋಚಿಸಿ. ಇದನ್ನು ಎದುರಿಸಿ ನಿಲ್ಲುವುದು ನಿಮ್ಮ ಕೈಲಿ ಸಾಧ್ಯವೇ? ನಿಮ್ಮ ಬಗ್ಗೆ ಗೌರವವಿಟ್ಟು ಹೇಳುತ್ತಿದ್ದೇನೆ. ಈಗ ನೀವು ದುಡಿಯುತ್ತಿರುವುದಕ್ಕೆ ಎರಡು ಪಟ್ಟು ಹಣ ಸುಲಭವಾಗಿ ಗಳಿಸಬಹುದು. ದಯವಿಟ್ಟು ನನ್ನ ಮಾತು ಕೇಳಿ ಒಪ್ಪಿಕೊಳ್ಳಿ" ಅಂದ.

